**C.C. 461-2015**

**2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ**

**ಪಿಡಬ್ಲ್ಯೂ-1**

**ಪ್ರಮಾಣ ವಚನ ಬೋಧಿಸಿದ ದಿನಾಂಕ : 28.06.2022**

**ಪಾಟೀ ಸವಾಲು: 1 ನೇ ಆರೋಪಿ ಪರ ಶ್ರೀ. ಆರ್.ಜಿ. ವಕೀಲರಿಂದ:**

ಕಟ್ಟಡ ಕುಸಿದಿರುವ ಬಗ್ಗೆ ನನಗೆ ಭಾತ್ಮೀದಾರರಿಂದ ಮಾಹಿತಿ ಬಂದಿತ್ತು. ಮಾಹಿತಿ ಬಂದ ನಂತರ ನೀವು ಕೂಡಲೇ ಸ್ಥಳಕ್ಕೆ ಹೋದಿರಾ ಎಂದರೆ ಸಾಕ್ಷಿ ನುಡಿಯುತ್ತಾರೆ ಮೇಲಾಧಿಕಾರಿಗೆ ಮಾಹಿತಿ ತಿಳಿಸಿ ಸಿಬ್ಬಂದಿಗಳಿಗೆ ಸ್ಥಳಕ್ಕೆ ಬರಲು ಸೂಚಿಸಿ ನಾನು ಸ್ಥಳಕ್ಕೆ ಹೋಗಿರುತ್ತೇನೆ. ಕಟ್ಟಡ ಕುಸಿದಿದ್ದ ನಿವೇಶನಗಳ ಸಂಖ್ಯೆ 51 ರಿಂದ 53. ನಿವೇಶನ ಸಂ.49, 50 ಹಾಗೂ 54 ರಲ್ಲಿ ಕಟ್ಟಡ ಕುಸಿದಿರಲಿಲ್ಲ ಎಂದರೆ ಸರಿ . ಸ್ಥಳೀಯರಲ್ಲಿ ವಿಚಾರಣೆ ಮಾಡಿದಾಗ ನಿವೇಶನ ಸಂಖ್ಯೆ 49, 50 ಹಾಗೂ 54 ರ ಮಾಲೀಕರ ಹೆಸರು ಸಲೀಂ , ಶ್ರೀಮತಿ ಶಹಜಾನ್ ಬೇಗಂ, ಅಂಜು ಪಾಷ , ಮಹಮದ್ ಅಲೀಂ, ಸುಲೈಮನ್ ಹಾಗೂ ಇತರರು ಎಂದು ತಿಳಿಯಿತು. ಸದರಿ ನಿವೇಶನಗಳ ಮಾಲೀಕತ್ವದ ಬಗ್ಗೆ ಯಾವುದೇ ದಾಖಲೆಗಳನ್ನು ನನಗೆ ಹಾಜರುಪಡಿಸಿಲ್ಲ. ಸ್ಥಳದಲ್ಲಿ ಕಟ್ಟಡ ಕಟ್ಟುತ್ತಿದ್ದ ಗುತ್ತಿಗೆದಾರರ ಹೆಸರು ತಿಳಿದುಬಂದಿಲ್ಲ. ನಾನು ದೂರು ನೀಡಿದ ನಂತರ ತನಿಖಾಧಿಕಾರಿ ಆ ಬಗ್ಗೆ ವಿಚಾರ ಮಾಡಿರುತ್ತಾರೆ. ನಾನು ಸ್ಥಳಕ್ಕೆ ಭೇಟಿ ನೀಡಿ ಅಲ್ಲಿ ಸ್ಥಳದಲ್ಲಿ ವಿಚಾರಿಸಿದಾಗ ತಿಳಿದು ಬಂದು ವಿಚಾರದ ಬಗ್ಗೆ ನಾನು ದೂರಿನಲ್ಲಿ ನಮೂದಿಸಿದ್ದೇನೆ ಎಂದರೆ ಸರಿ . ನಾನು ಸ್ಥಳಕ್ಕೆ ಹೋಗದೇ ಠಾಣೆಯಲ್ಲಿಯೇ ಕುಳಿತು ನನಗೆ ಬಂದ ಮಾಹಿತಿ ಮೇರೆಗೆ ಮಾತ್ರ ನಾನು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ

**ಪಾಟೀ ಸವಾಲು: 2 ನೇ ರಿಂದ 4 ನೇ ಆರೋಪಿತರ ಪರ ವಕೀಲರಿಂದ:**

ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆ: ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸ ಇದೆ**

**(ವೇದಮೂರ್ತಿ ಬಿ.ಎಸ್.)**
**2ನೇ ಅ ಮು ಮ ದಂ.**